

# ದೃಷ್ಟಿ ಮರಳಿಸಿದ ಶಸ್ತ್ರಚಿಕಿತ್ಸೆ

**ಕಾರ್ಮಿಕರು ಕೆಲಸ ಮಾಡುವಾಗ ಕಣ್ಣುಗಳಿಗೆ ಆಘಾತ, ಗಾಯ ಸಾಮಾನ್ಯ. ಸೂಕ್ತವಾದ ಕನ್ನಡಕ ಬಳಸುವುದರಿಂದ ಈ ಹಾನಿಯಿಂದ ಪಾರಾಗಬಹುದು. ಕಣ್ಣಿನ ಮಸೂರಗಳಿಗೆ ಪೆಟ್ಟಾದರೆ ಶಸ್ತ್ರಚಿಕಿತ್ಸೆ ಮುಖಾಂತರ ದೃಷ್ಟಿ ಮರಳಿ ಪಡೆಯಬಹುದು.**

**ಉಮಾ ಅನಂತ್**

ಇಪ್ಪತ್ತೇಳು ವರ್ಷದ ಮೊಹಮ್ಮದ್ ಅಜರ್ ಬೀಗದ ಕೈ ದುರಸ್ತಿ ಕೆಲಸ ಮಾಡುವ ಯುವಕ. ಕೆಲಸದ ಸಂದರ್ಭದಲ್ಲಿ ಈತನ ಕಣ್ಣಿಗೆ ಗಾಯವಾಗಿತ್ತು. ಕಬ್ಬಿಣದ ಚೂರೊಂದು ಆತನ ಎಡಗಣ್ಣಿಗೆ ಹೊಕ್ಕು ದೃಷ್ಟಿಯ ಮೇಲೆ ಗಂಭೀರ ಪರಿಣಾಮ ಬೀರಿತ್ತು. ತಕ್ಷಣ ಕಣ್ಣಿನ ಆಸ್ಪತ್ರೆ ತೆರಳಿದ ಅಜರ್‌ಗೆ ಈ ಸಮಸ್ಯೆಗೆ ಶಸ್ತ್ರಚಿಕಿತ್ಸೆ ಒಂದೇ ದಾರಿ ಎಂದು ವೈದ್ಯರು ತಿಳಿಸಿದರು. ಏಕೆಂದರೆ ಕಬ್ಬಿಣದ ಚೂರು ಆತನ ಕಣ್ಣಿನೊಳಗೆ ಹೊಕ್ಕ ಪರಿಣಾಮ ಆತನ ಕಣ್ಣಿನ ಮಸೂರ ಹಾಗೂ ರೆಟಿನಾಗೆ ಧಕ್ಕೆ ಉಂಟಾಗಿತ್ತು. ಇದರಿಂದ ಆತನಿಗೆ ದೃಷ್ಟಿ ಸಮಸ್ಯೆ ಎದುರಾಗಿತ್ತು. ಒಂದು ಅಡಿ ಮೀರಿದ ನಂತರ ಏನನ್ನು ನೋಡಲು ಆತನ ಕಣ್ಣು ಶಕ್ತವಾಗಿರಲಿಲ್ಲ. ಬೆಂಗಳೂರಿನ ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ಆತನಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿದ ಬಳಿಕ ಆತನಿಗೆ ಮತ್ತೆ ದೃಷ್ಟಿ ಬಂದಿದೆ. ಈಗ ಆತ ಮೊದಲಿನಂತೆ ಕೆಲಸ ಮಾಡಲು ಶುರು ಮಾಡಿದ್ದಾನೆ.

ಬೆಂಗಳೂರಿನ ಪೌರಕಾರ್ಮಿಕ ನಾಗರಾಜ್ ಅವರದ್ದೂ ಇದೇ ಸಮಸ್ಯೆ. ಎಂದಿನಂತೆ ಇವರು ಕೆಲಸದಲ್ಲಿ ನಿರತರಾಗಿರುವಾಗ ಕಸಬರಿಕೆ ಕಡ್ಡಿಯೊಂದು ಬಲ ಕಣ್ಣಿಗೆ ಚುಚ್ಚಿತ್ತು. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರ ಕಣ್ಣನ್ನು ಪರೀಕ್ಷಿಸಿದ ವೈದ್ಯರು ಕಣ್ಣಿನ ಮಸೂರಕ್ಕೆ ಪೆಟ್ಟಾಗಿದ್ದು ಸೋಂಕು ಕೂಡ ತಗಲಿದೆ ಎಂಬುದನ್ನು ಪತ್ತೆ ಹಚ್ಚಿದರು. ಲೆನ್ಸ್‌ಗೆ ಪೆಟ್ಟು ಬಿದ್ದ ಕಾರಣ ಬಲಗಣ್ಣಿನಲ್ಲಿ ಪೊರೆ ಉಂಟಾಗಿ ದೃಷ್ಟಿಗೆ ಹಾನಿಯಾಗಿತ್ತು. ನಾಗರಾಜ್ ಅವರಿಗೆ ಕಣ್ಣಿನ ಶಸ್ತ್ರಚಿಕಿತ್ಸೆ ಒಂದೇ ದಾರಿಯಾಗಿತ್ತು. ಅದರಂತೆ ಶಸ್ತ್ರಚಿಕಿತ್ಸೆಗೆ ಒಳಗಾದ ನಾಗರಾಜ್ ಇದೀಗ ಸಂಪೂರ್ಣ ಚೇತರಿಸಿಕೊಂಡು ದೃಷ್ಟಿ ಮರಳಿ ಪಡೆದಿದ್ದಾರೆ.

ಮೇಲಿನ ಎರಡೂ ಉದಾಹರಣೆಗಳು ಕಾರ್ಮಿಕರ ಕಣ್ಣಿಗೆ ಕೆಲಸದ ವೇಳೆ ಉಂಟಾಗುವ ಪೆಟ್ಟು, ಆಘಾತ, ತೊಂದರೆಗೆ ಸಂಬಂಧಿಸಿದ್ದು. ಬೆಂಗಳೂರಿನ ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆಯ ವೈದ್ಯರ ತಂಡ ಈ ಇಬ್ಬರ ಕಣ್ಣುಗಳಿಗೆ ತಗುಲಿದ ಗಾಯವನ್ನು ಪರೀಕ್ಷಿಸಿ ಶಸ್ತ್ರಚಿಕಿತ್ಸೆ ಮೂಲಕ ದೃಷ್ಟಿ ಮರಳುವಂತೆ ಮಾಡಿದ್ದಾರೆ. ಸಾಮಾನ್ಯವಾಗಿ ಕೆಲಸದ ಅವಧಿಯಲ್ಲಿ ಕೆಲವೊಮ್ಮೆ ಕಣ್ಣಿಗೆ ತಗಲುವ ಗಾಯಗಳು ಗಂಭೀರ ಪರಿಣಾಮ ಬೀರುವ ಸಾಧ್ಯತೆ ಹೆಚ್ಚು. ಇಂಥ ತೊಂದರೆ ಶೇ. 70ರಷ್ಟು ಕಾರ್ಮಿಕ ವಲಯದಲ್ಲಿ ಕಂಡುಬರುತ್ತದೆ ಎಂಬುದು ತಜ್ಞ ವೈದ್ಯರ ಅಭಿಮತ.

‘ನಾಗರಾಜ್ ಮತ್ತು ಮೊಹಮ್ಮದ್ ಅವರ ಕಣ್ಣುಗಳಿಗೆ ಆದ ಗಾಯದ ಸ್ವರೂಪ ಬೇರೆ ಬೇರೆ ಆಗಿದ್ದರೂ ಕೆಲಸದ ಸಂದರ್ಭದಲ್ಲಿ ಆದ ಆಕಸ್ಮಿಕ ಘಟನೆಯಿಂದ ಇಬ್ಬರೂ ಸಮಸ್ಯೆಗೆ ತುತ್ತಾಗಿದ್ದರು. ಎರಡೂ ಗಂಭೀರ ಪ್ರಕರಣಗಳೇ ಆಗಿದ್ದು, ತಕ್ಷಣ ಚಿಕಿತ್ಸೆ ಪಡೆಯದೇ ಇದ್ದರೆ ಇಬ್ಬರೂ ಶಾಶ್ವತ ವಾಗಿ ದೃಷ್ಟಿ ಕಳೆದುಕೊಳ್ಳುವ ಅಪಾಯ ಇತ್ತು’ ಎನ್ನುತ್ತಾರೆ ಬೆಂಗಳೂರಿನ ಡಾ. ಅಗರವಾಲ್ ಕಣ್ಣು ಆಸ್ಪತ್ರೆಯ ವೈದ್ಯಕೀಯ ಮುಖ್ಯಸ್ಥ ಡಾ. ಡಿ. ರವಿ.

‘ಬೆಂಗಳೂರಿನಲ್ಲಿ ತಿಂಗಳಿಗೆ ಸುಮಾರು ಇಂತಹ 25 ಪ್ರಕರಣಗಳು ನಡೆಯುತ್ತವೆ. ಬಹುತೇಕ ಪ್ರಕರಣಗಳಲ್ಲಿ ಪ್ರಾಥಮಿಕ ರಕ್ಷಣೆಯ ಕೊರತೆಯಿರುತ್ತದೆ. ಇಂಥ ಸಮಸ್ಯೆಗಳನ್ನು ತಡೆಯಲು ದೊಡ್ಡ ಮಟ್ಟದ ಜಾಗೃತಿ ಅಗತ್ಯವಿದೆ’ ಎಂದೂ ಹೇಳುತ್ತಾರೆ ಈ ವೈದ್ಯರು.

‘ಕೂಲಿ ಕೆಲಸ, ಕೃಷಿ, ಕೀಲಿ ತಯಾರಿ ಮಾಡುವುದು, ಕಬ್ಬಿಣದ ವೆಲ್ಡಿಂಗ್, ಮರದ ಕೆಲಸ, ಕಸ ಗುಡಿಸುವುದು, ಕಲ್ಲು ಬಂಡೆ ಒಡೆಯುವುದು.. ಇವೇ ಮುಂತಾದ ಕೆಲಸ ಮಾಡುವಾಗ ಆಕಸ್ಮಿಕವಾಗಿ ಕಣ್ಣುಗಳಿಗೆ ಏಟು ತಗುಲಬಹುದು. ಶೇ.70ರಷ್ಟು ಕಣ್ಣುಗಳಿಗೆ ಗಾಯವಾಗುವಂಥ ಪ್ರಕರಣಗಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುತ್ತವೆ. ಈ ಸಂದರ್ಭದಲ್ಲಿ ಕಣ್ಣಿಗೆ ಘಾಸಿಯಾಗದಂಥ ಕನ್ನಡಕ (ಪ್ರೊಟೆಕ್ಟಿವ್ ಐ ಗ್ಲಾಸಸ್)ಗಳನ್ನು ಧರಿಸಿ ಕೆಲಸ ಮಾಡಬೇಕು’ ಎಂದು ಸಲಹೆ ಮಾಡುತ್ತಾರೆ ಇದೇ ಆಸ್ಪತ್ರೆಯಲ್ಲಿ ಸರ್ಜನ್ ಆಗಿರುವ ಡಾ. ಆಶ್ರಯ ನಾಯಕ್.

‘ಕಟ್ಟಡ ಕಾರ್ಮಿಕರು ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದು ಕೂಡ ಕಣ್ಣಿಗೆ ಹಾನಿಯಾಗಲು ಕಾರಣ. ದೀಪಾವಳಿ ಹಬ್ಬದ ಸಮಯದಲ್ಲಿ ಮಕ್ಕಳು ಪಟಾಕಿ ಬಿಡುವಾಗಲೂ ಕಣ್ಣಿಗೆ ಸೇಫ್ಟಿ ಐ ಗ್ಲಾಸ್ ಹಾಕಿಕೊಳ್ಳುವುದು ಉತ್ತಮ. ಕಣ್ಣಿನ ರೆಟಿನಾ ಭಾಗಕ್ಕೆ ಹಾನಿಯಾದರೆ ಕಷ್ಟ. ಆದರೆ ಕೂಲಿ ಕಾರ್ಮಿಕರು ಕೆಲಸ ಮಾಡುವಾಗ ಕಣ್ಣಿಗೆ ಹಾನಿಯಾದರೆ ಅವೆಲ್ಲವೂ ಗುಣಪಡಿಸಲು ಸಾಧ್ಯ’ ಎನ್ನುತ್ತಾರೆ ಡಾ. ಆಶ್ರಯ.

## ಪಟಾಕಿ-ಎಚ್ಚರ

ಬೆಳಕಿನ ಹಬ್ಬ ಹತ್ತಿರ ಬರುತ್ತಿದೆ. ಪಟಾಕಿ ಸಿಡಿಸುವ ಆಸಕ್ತಿ ಮಕ್ಕಳದ್ದು. ಇಂತಹ ಸಮಯದಲ್ಲಿ ಕಣ್ಣುಗಳ ಬಗ್ಗೆ ಎಚ್ಚರ ಇರಲಿ. ಕಣ್ಣುಗಳಿಗೆ, ಅಂಗಾಂಗಗಳಿಗೆ ಯಾವುದೇ ಗಾಯಗಳಾಗದಂತೆ ನೋಡಿಕೊಳ್ಳಿ ಎಂಬುದು ವೈದ್ಯರ ಸಲಹೆ.